File No.DTE-CDC0CDC2/52/2021-JD CDC-DEPT TECH EDUCATION

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560 001, ದಿನಾಂಕ: 23/03/2021.

## ಸುತ್ತೋಲೆ

**ವಿಷಯ:** ಪೂರ್ಣಕಾಲಿಕ ನೆಲೆಯಲ್ಲಿ ಅನುದಾನಿತ ಪಾಲಿಟೆಕ್ನಿಕ್/ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗವನ್ನು ಮಾಡಲು ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು/ಸಹಾಯಕ/ಸಹ ಪ್ರಾಧ್ಯಾಪಕರು ನಿಯೋಜನೆ ಮೇರೆಗೆ ಉನ್ನತ ಶಿಕ್ಷಣ ಪಡೆಯಲು ನಿರಾಕ್ಷೇಪಣಾ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸುತ್ತಿರುವುದು ಸರಿಯಷ್ಟೆ. ಈ ಸಂಬಂಧ 2021-22ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಪ್ರವೇಶ ಬಯಸಿ ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು ನಿರಾಕ್ಷೇಪಣಾ ಪತ್ರವನ್ನು ಬೋಧಕ ವರ್ಗದವರಿಗೆ ಕೆಸಿಎಸ್ ನಿಯಮ 61(3)ರ ಅಪೆಂಡಕ್ಸ್-IIಎ ನಿಯಮಾನುಸಾರ ನೀಡಲಾಗುವುದು. 2021-22ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಪ್ರವೇಶ ಬಯಸುವ ಬೋಧಕ ವರ್ಗದವರು ಗೂಗಲ್ ಫಾರ್ಮ್‌ನಲ್ಲಿ ಕೇಳಿದ ವಿಷಯಗಳ ವಿವರವನ್ನು ದಿನಾಂಕ: 31/03/2021ರೊಳಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಗೂಗಲ್ ಫಾರ್ಮ್‌ನಲ್ಲಿ ಬಂದ ಪ್ರತಿಕ್ರಿಯೆಗೆ ಇಲಾಖೆಯ ವಿವಿಧ ವಿಭಾಗದ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಅದರ ಅನುಸಾರ ಅರ್ಹ ಬೋಧಕ ವರ್ಗದವರಿಗೆ 2021-22ನೇ ಸಾಲಿನಲ್ಲಿ ಉನ್ನತ ಶಿಕ್ಷಣಕ್ಕೆ ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗುವುದು.

ಕೆಸಿಎಸ್ ನಿಯಮ 61(3)ರ ಅಪೆಂಡಕ್ಸ್-II 'ಎ' ಯ ನಿಯಮ I ರ ಉಪನಿಯಮ(1) ರಿಂದ (10)ರನ್ವಯ ನೌಕರರನ್ನು ಪೂರ್ಣಕಾಲಿಕ ನೆಲೆಯಲ್ಲಿ ಎಂಟೆಕ್/ಎಂಇ/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ನಿಯೋಜನೆಯನ್ನು ಸರ್ಕಾರದ ಹಂತದಲ್ಲಿಯೇ ಮಾಡಲಾಗುವುದು. ಈ ಸಂಬಂಧ ಕೆಳಕಂಡ ಅಂಶಗಳನ್ನು ಗಮನಕ್ಕೆ ತರಲಾಗಿದೆ.

1. ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗ ಮಾಡಲು ಉಪನ್ಯಾಸಕರು ಕನಿಷ್ಠ 5 ವರ್ಷಗಳ ನಿರಂತರ/ಸಕ್ರಮ ಸೇವೆಯನ್ನು ಸಲ್ಲಿಸಿರಬೇಕು ಹಾಗೂ ಕ್ರಮವಾಗಿ 48/45 ವರ್ಷ ವಯಸ್ಸಿನೊಳಗಿರಬೇಕು.
2. ಉಪನ್ಯಾಸಕರು ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.
3. ಉಪನ್ಯಾಸಕರು ಉಪನಿಯಮ(7)ರನ್ವಯ ಉನ್ನತ ವ್ಯಾಸಂಗಕ್ಕೆ ಒಂದು ಬಾರಿ ಮಾತ್ರ ನಿಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ.

4. ಉಪನಿಯಮ(4)ರನ್ವಯ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಬೇಕಾದ ಉಪನ್ಯಾಸಕರ ಸಂಖ್ಯೆಯನ್ನು ಸದರಿಯವರ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5ನ್ನು ಮೀರದಂತೆ ಕನಿಷ್ಠದಲ್ಲಿ ಇಟ್ಟುಕೊಂಡಿರಬೇಕು.
5. ಉಪನ್ಯಾಸಕರನ್ನು ಉಪನಿಯಮ(5)ರನ್ವಯ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಉನ್ನತ ವ್ಯಾಸಂಗಕ್ಕೆ ನಿಯೋಜನೆ ಮಾಡಲಾಗುತ್ತದೆ.
6. ಪೂರ್ಣಕಾಲಿಕ ನೆಲೆಯಲ್ಲಿ ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರ ಪ್ರಸ್ತಾವನೆಯನ್ನು ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ, ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಶಿಫಾರಸ್ಸಿನೊಂದಿಗೆ ಈ ಕಛೇರಿ ಸುತ್ತೋಲೆ ಸಂ: ಡಿಟಿಇ/16/ಸಿಡಿಸಿ(2)/2018-19, ದಿನಾಂಕ: 24/07/2018 (ಅನುಬಂಧ ಲಗತ್ತಿಸಿದೆ)ರಲ್ಲಿ ತಿಳಿಸಿರುವಂತೆ, ಎಲ್ಲಾ ದಾಖಲೆಗಳನ್ನು/ಮಾಹಿತಿಗಳನ್ನು ದೃಢೀಕರಿಸಿ ದ್ವಿ-ಪ್ರತಿಗಳೊಂದಿಗೆ ಸಲ್ಲಿಸಬೇಕು.
7. ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗವನ್ನು ಮಾಡಲು ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ ಸಂದರ್ಶನಕ್ಕೆ ಹಾಜರಾಗಲು ನೀಡುವ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು.
8. ಪೂರ್ಣಕಾಲಿಕ ನೆಲೆಯ ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಇಲಾಖೆಯ/ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರವೇಶ ಶುಲ್ಕವನ್ನು ಪಾವತಿಸಬೇಕು.

**ಜಂಟಿ ನಿರ್ದೇಶಕರು(ಸಿಡಿಸಿ)**

ಇವರಿಗೆ,

1) ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜು/ ಅನುದಾನಿತ ಪಾಲಿಟೆಕ್ನಿಕ್ ಪ್ರಾಂಶುಪಾಲರಿಗೆ ಮತ್ತು ಉಪನ್ಯಾಸಕರಿಗೆ ಮಾಹಿತಿಗಾಗಿ.
2) ಇ-ಆಡಳಿತ ವಿಭಾಗ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.